# ಬರುವೆಯಾ ಮತ್ತೆ ರಾಮ?

ಯಾವ ಮೋಹಕ ಸೆಳತ
ನನ್ನ ಕರೆದಿದ್ದು ಮೇಲಿಂದ ಕೆಳಗೆ
ವಸುಂಧರೆಯ ಕಡೆಗೆ–
ರಾಮನ ಮೇಲಿನ ಭಕ್ತಿಯೇ

ಈ ಅಂಗೈಯೊಳಗಿನ ಕಾಳಿಗಿಂತ
ಅಂದು ನನ್ನ ಬೆನ್ನ ಮೇಲೆಳದ
ಮೂರು ಗೆರೆಯ
ನಿನ್ನ ಕೈಯ ಕಂಪು ತಂಪಾಗಿ
ಮನದಾಳದಲ್ಲೆಲ್ಲೋ ಹೆಪ್ಪುಗಟ್ಟಿದೆ ರಾಮ

ಮತ್ತೆ ಬರುವೆಯಾ ರಾಮ ಕಾಡಿಗೆ
ಇನ್ನೊಬ್ಬ ದಶರಥ ಸಿಕ್ಕರೂ ಸಿಕ್ಕಾನು
ನಿನ್ನ ಕಾಡಿಗೆ ಅಟ್ಟಲು
ಭರತನಿಗೆ ಪಟ್ಟಕಟ್ಟಲು
ಬಂದರೂ ಬಂದಾಳು
ನಿನ್ನ ಜೊತೆ
ಸೀತಾಮಾತೆ

ಆದರೆ ಎಲ್ಲಿದೆ ರಾಮ ಆ ದಟ್ಟ ಕಾಡು
ಎಲ್ಲ ನಾಡಾಗಿದೆ
ನರಕದ ಬೀಡಾಗಿದೆ
ನಿನ್ನ ನವಿರಾದ ಆ ಕೈಯ ಸ್ಪರ್ಶಸುಖ
ಮತ್ತೆ ಸಿಗಲಾರದೇನೋ?
ನನಗೆ ದಕ್ಕಲಾರದೇನೋ?
ಮತ್ತೆ ಬರುವೆಯಾ ರಾಮ ಕಾಡಿಗೆ?

● ಕಮಲಾಕರ ಕೆ.ಆರ್.



# ಅಳಿಲು ಸೇವೆ

ನಾನಿಟ್ಟ ಕಾಳುಗಳನು ಪಟ್ಟನೆ
ಪುಟ್ಟ ಕೈಗಳಿಗಿರಿಸಿಕೊಂಡು
ಚಂಗನೆ ಮಾಯವಾಯಿತೊಂದು
ಕೆಂಬಣ್ಣದ ಚೆಂದದ ಇಣಚಿ

ಮತ್ತದೇ ಮರದಿಂದಿಳಿದು
ಆಕಡೆ ಈಕಡೆ ಇಣುಕುತ
ಬರುತಿತ್ತು ಮರಿಗಳಿಗೆ
ತನ್ನವರಿಗೆ ಕಾಳುಗಳನು ಹಂಚಿ

ರಾಮ ಸೇತುವೆ ಕಟ್ಟುವಾಗ
ಸೇವೆ ಮಾಡಿದ ಸಣ್ಣ ಅಳಿಲು
ಮರದ ತುಂಬ
ಸರಿದಾಡುವ ಮಿಂಚಿನಗೊಂಚಲು

ಅದೆಷ್ಟು ಹೊತ್ತು ಕಾದೆನು
ಕಾಳುಗಳ ಹಿಡಿದು
ಬರಲೇ ಇಲ್ಲ
ಶ್ರೀರಾಮನಿಂದ ಬೆನ್ನೊಳು ಮೂರು
ಬಂಗಾರದ ಗೆರೆಗಳನೆಳೆಸಿಕೊಂಡ
ಪುಟ್ಟ ಇಣಚಿ ಮತ್ತೆಂದೂ.

● ರಂಜಿತಾ ಎಂ.